ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – NOV/DEC 2025

## KANNADA – I SEMESTER BCOM (Repeaters)

## 24BCO11K: ವಾಣಿಜ್ಯ ಕನ್ನಡ 1

**Time: 3 Hours** **Max. Marks: 80**

**I. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (160 ಪದಗಳಿಗೆ ಮೀರದಂತೆ)** 3x10=30

1. ಪಂಪ, ಕುಮಾರವ್ಯಾಸ, ರನ್ನ ಇವರಲ್ಲಿ ಯಾರಾದರೂ ಇಬ್ಬರ ಕವಿ ಕೃತಿ ಪರಿಚಯಿಸಿ.
2. "ಯಾವುದೇ ಗುರಿಯೊಂದರ ಸಾಧನೆಗೆ ತೀವ್ರವಾದ ಹಂಬಲ ಎಷ್ಟು ಮುಖ್ಯ" ಧ್ಯಾನದಲ್ಲಿ ಕಂಡ ಜೇಡರ ಹುಳು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.
3. "ಮನಸ್ಸಿಗೆ ಮೂಗುದಾರ" ಲೇಖನದಲ್ಲಿ ಕಂಡುಬರುವ ಮನೋನಿಯಂತ್ರಣವನ್ನು ಕುರಿತು ಬರೆಯಿರಿ.
4. ಯಾವುದಾದರೂ ಮೂರು ರಿಟೇಲ್ ವ್ಯಾಪಾರಗಳ ಸಾಧಕ ಬಾಧಕಗಳನ್ನು ಚರ್ಚಿಸಿ.

**II. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (80 ಪದಗಳಿಗೆ ಮೀರದಂತೆ)** 5x5=25

1. ಹುಟ್ಟಿನಿಂದ ಬೆಳೆದು ಬಂದ ಭಾಷೆಯ ಸೊಗಸು ಎಂತಹದು?
2. ಕನ್ನಡ ಭಾಷೆಯ ಬರವಣಿಗೆಯ ಸ್ವರೂಪವು ತಂತ್ರಜ್ಞಾನದಿಂದ ಹೇಗೆ ಬದಲಾಯಿತು?
3. ಭರತನು ಪ್ರತಿಮಾ ಗೃಹವನ್ನು ಪ್ರವೇಶಿಸಿದ ಸಂದರ್ಭವನ್ನು ಕುರಿತು ಬರೆಯಿರಿ.
4. ಜ್ಞಾನಪರ್ವಕ್ಕಿಂತಲೂ ಮುಂಚಿತವಾಗಿಯೇ ಭಾರತದಲ್ಲಿ ಪ್ರಬುದ್ಧ ವಿಜ್ಞಾನ ಮತ್ತು ತಂತ್ರಜ್ಞಾನವಿತ್ತು ಎಂದು ಹೇಗೆ ತಿಳಿಸಲಾಗಿದೆ?
5. ತತ್ಸಮ ತದ್ಭವ ಎಂದರೇನು? ಉದಾಹರಣೆ ಸಹಿತ ಬರೆಯಿರಿ.
6. ಸಾಲ ಮನ್ನಾ ಬಗ್ಗೆ ನಿಮ್ಮ ನಿಲುವುಗಳೇನು? ಮಂಡಿಸಿ.

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿ.** 1x5=5

ಒಂದು ಕಾಡಿನ ನಿವಾಸಿಗಳಾಗಿದ್ದ ಕಪ್ಪೆಗಳಲ್ಲಿ ಕೆಲವು ಒಂದು ದಿನ ಆಹಾರ ಹುಡುಕಿಕೊಂಡು ಕುಪ್ಪಳಿಸುತ್ತ ಗುಂಪಾಗಿ ಹೋಗುತ್ತಿದ್ದವು. ಅವುಗಳಲ್ಲಿ ಎರಡು ಆಯ ತಪ್ಪಿ ದಾರಿಯಲ್ಲಿದ್ದ ಹಳ್ಳವೊಂದಕ್ಕೆ ಬಿದ್ದು ಬಿಟ್ಟವು, ಮಿಕ್ಕ ಕಪ್ಪೆಗಳು ಹಳ್ಳದ ಸುತ್ತ ಗುಂಪು ಕೂಡಿದವು. ಇಣುಕಿ ನೋಡಿದವು. ಹಳ್ಳವು ಆಳವಾಗಿತ್ತು. ಒಳಗೆ ಬಿದ್ದ ನತದೃಷ್ಟ ಕಪ್ಪೆಗಳನ್ನು ಕುರಿತು, "ಇಷ್ಟು ಆಳದ ಹಳ್ಳದಿಂದ ಹೇಗೆ ಮೇಲಕ್ಕೆ ಬರುತ್ತೀರಿ? ನಿಮ್ಮ ಕತೆ ಮುಗೀತು" ಎಂದು ಒಕ್ಕೊರಲಿನಿಂದ ವಟಗುಟ್ಟಿದವು. ಒಳಗೆ ಬಿದ್ದ ಕಪ್ಪೆಗಳು ಪ್ರಾಣ ಉಳಿಸಿಕೊಳ್ಳಲು ಜಿಗಿದಾಡಿದಂತೆಲ್ಲ, ಹಳ್ಳದ ಮೇಲೆ ಸುತ್ತುವರೆದು ಕುಳಿತಿದ್ದ ಕಪ್ಪೆಗಳು, "ನೀವು ಮೇಲೆ ಬರುವುದು ಸಾಧ್ಯವೇ ಇಲ್ಲ. ಸುಮ್ಮನೇ ಯಾಕೆ ಎಗರಾಡಿ ಮೈ ನೋಯಿಸಿಕೊಳ್ಳುತ್ತೀರಿ. ನೀವು ಸತ್ತಂತೆಯೇ ಸರಿ. ವ್ಯರ್ಥ ಪ್ರಯತ್ನ" ಎಂದು ಮತ್ತೆ ಮತ್ತೆ ವಟಗುಟ್ಟುತ್ತಲೇ ಇದ್ದವು. ಹಳ್ಳದ ಮೇಲಿನಿಂದ ಕಪ್ಪೆಗಳು ಸಾಮೂಹಿಕವಾಗಿ ಪದೇ ಪದೇ ವಟಗುಟ್ಟುತ್ತ ಹಳ್ಳದೊಳಗಿನ ಕಪ್ಪೆಗಳ ಪ್ರಯತ್ನವನ್ನು ನಿರುತ್ಸಾಹಗೊಳಿಸುತ್ತಿದ್ದವು, ತಳದಲ್ಲಿ ಜಿಗಿದಾಡುತ್ತಿದ್ದ ಒಂದು ಕಪ್ಪೆಯು

ತಾನು ಹೋರಾಡಿ ಪಾರಾಗಬಲ್ಲೆ ಎನ್ನುವ ಅಂತಃಸ್ಥೈರ್ಯವನ್ನೇ ಕಳೆದುಕೊಂಡಿತು. ಮೃತ್ಯುಕೂಪದಿಂದ ಹೊರ ಬರಲಾರೆ ಎನಿಸಿ ಎದೆ ಹಾರಿ ಅಸುನೀಗಿತು.

ಇನ್ನೂ ಜೀವಂತವಾಗಿದ್ದ ಕಪ್ಪೆಯು ತನ್ನ ಪ್ರಯತ್ನವನ್ನು ಬಿಡದೆ ಮುಂದುವರಿಸುತ್ತಿತ್ತು. ಕಪ್ಪೆಗಳು ಮೇಲಿನಿಂದ "ನಿನ್ನ ಕತೆಯೂ ಅಷ್ಟೇ" ಎಂದು ನಿರಾಶಾವಾದದ ಬಲೆಯನ್ನು ನೇಯುತ್ತಿದ್ದವು. "ಜಿಗಿದಷ್ಟೂ ಮೈ ನೋಯಿಸಿಕೊಳ್ಳುತ್ತೀ, ಅಷ್ಟೇ. ನೋವುಂಡು ಸಾಯುವ ಬದಲು ನಿನ್ನ ಸ್ನೇಹಿತನಂತೆ ನೋವಿಲ್ಲದ ಸಾವನ್ನು ಒಪ್ಪಿಕೊಳ್ಳುವುದೇ ಮೇಲು" ಎಂದು ಅದೆಷ್ಟು ಸಲ ಹೇಳಿದವೋ! ಆದರೆ ಆ ಕಪೆಯು ಮತ್ತಷ್ಟು ಶಕ್ತಿ ಕೂಡಿಸಿಕೊಂಡು ಪ್ರಯತ್ನವನ್ನು ಮುಂದುವರೆಸಿ ಹಳ್ಳದ ದಡ ಸೇರಿ ಬಚಾವಾಯಿತು. ಮೇಲಕ್ಕೆ ಬಂದ ಕಪ್ಪೆಯನ್ನು ಮಿಕ್ಕ ಕಪ್ಪೆಗಳು ಸುತ್ತುವರೆದವು. ತಮ್ಮ ಮಾತುಗಳಿಗೆ ಲಕ್ಷ್ಯ ಕೊಡದೆ ಕೊನೆಗೂ ಸಾವಿನ ದವಡೆಯಿಂದ ಪಾರಾಗಿ ಬಂದ ಆ ಕಪ್ಪೆಯನ್ನು ಕುರಿತು. "ಎಷ್ಟು ಪ್ರಯತ್ನಿಸಿದರೂ ನೀನು ಬದುಕಲಾರೆ ಎಂದು ನಾವು ಹೇಳುತ್ತಿದ್ದೆವು. ನಿನಗೆ ಕೇಳಿಸುತ್ತಿರಲಿಲ್ಲವೇ?" ಎಂದು ಕೇಳಿದವು. ಆ ಕಪ್ಪೆಯು ನಿಟ್ಟುಸಿರು ಬಿಡುತ್ತಾ "ಎಲ್ಲರೂ ಸೇರಿ ಏನೋ ವಟಗುಟ್ಟುತ್ತಿದ್ದೀರಿ ಅನ್ನಿಸುತ್ತಿತ್ತು. ನನಗೆ ಕಿವಿ ಕೇಳಿಸುವುದಿಲ್ಲ. ಬಹುಶಃ ಪ್ರಯತ್ನವನ್ನು ಬಿಡದೆ ಮುಂದುವರಿಸುವಂತೆ ನನ್ನಲ್ಲಿ ಉತ್ಸಾಹ ತುಂಬುತ್ತಿದ್ದೀರಿ ಎಂದುಕೊಂಡು ಪ್ರಯತ್ನವನ್ನು ಮುಂದುವರಿಸಿದೆ. ಧನ್ಯವಾದಗಳು" ಎಂದು ಹೇಳಿ ಮುಂದಕ್ಕೆ ಕುಪ್ಪಳಿಸಿತು. ಅವಾಕ್ಕಾದ ಮಿಕ್ಕ ಕಪ್ಪೆಗಳು ಅದನ್ನು ಹಿಂಬಾಲಿಸಿದವು. **(ಒಟ್ಟು ಪದಗಳು–207. ಇದನ್ನು 69 ಪದಗಳಿಗೆ ಸಂಕ್ಷೇಪಿಸಿ.)**

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** **2x1=2**

**V. ಇವುಗಳಲ್ಲಿ ಎರಡು ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.** **2x2=4**

1. ತಂತ್ರಜ್ಞಾನ 2. ಉದ್ಯೋಗ
3. ಪ್ರತಿಮೆ 4. ಪ್ರಜಾಪ್ರಭುತ್ವ

**VI. ನಿಮ್ಮ ರಸ್ತೆಯ ಬೀದಿ ದೀಪವನ್ನು ಸರಿಪಡಿಸುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ.** **1x5=5**

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** **4x1=4**

1. ರೀಟೆಲ್ ವ್ಯಾಪಾರ 2. ಕೆಳೆಯ 3. ಹೊನ್ನು
4. ಕಿರಾಣಿ ಅಂಗಡಿ 5. ದತ್ತಾಂಶ 6. ಪಡುವಣ

**VIII. ಇವುಗಳಿಗೆ ಕೊಟ್ಟಿರುವ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** **5x1=5**

1. "ಕನ್ನಡ; ಈ ಹೊಸ ಶತಮಾನದ ಸವಾಲುಗಳು" ಲೇಖನವನ್ನು ಬರೆದವರು ಯಾರು?
   ಅ. ಕೆ. ವಿ. ನಾರಾಯಣ ಆ. ದ.ರಾ.ಬೇಂದ್ರೆ ಇ. ಡಿಎಸ್ ಕರ್ಕಿ ಈ. ಸಿದ್ದಲಿಂಗಯ್ಯ
2. ಗಾಂಧೀಜಿಯವರ ತಾಯಿಭಾಷೆ ಯಾವುದು?
   ಅ. ಅಸ್ಸಾಮಿ ಆ. ಗುಜರಾತಿ ಇ. ಮರಾಠಿ ಈ. ತಮಿಳು
3. "ಲೆಟ್ ಅವರ್ ಚಿಲ್ಡ್ರನ್ ಗೋ" ಈ ಪುಸ್ತಕ ಬರೆದವರು ಯಾರು?
   ಅ. ಪ್ಯಾಟ್ರಿಕ್ ಆ. ವಾಟ್ಸನ್ ಇ. ಹಕ್ಸಲಿ ಈ. ಸ್ಕಿನ್ನರ್
4. "ಕರ್ನಾಟಕ ಸ್ತ್ರೀ ಶಕ್ತಿ ಯೋಜನೆ" ಯನ್ನು ಯಾವಾಗ ಪ್ರಾರಂಭಿಸಲಾಯಿತು?
   ಅ. 1951 ಆ. 2000 ಇ. 1960 ಈ. 1968
5. ಭಾರತದ ರೈತರಿಗೆ ತಿಳಿದಿದ್ದ ಭತ್ತದ ತಳಿಗಳ ಅಂದಾಜು ಎಷ್ಟು?
   ಅ. 1 ಲಕ್ಷ ಆ. 50 ಸಾವಿರ ಇ. 25 ಸಾವಿರ ಈ. 30 ಸಾವಿರ

*******

ST. FRANCIS DE SALES COLLEGE · EXCELLENCE · EFFICIENCY · TRANSFORMATION · ELECTRONICS CITY, BENGALURU